ISSN : 3048-7137

# ಆರಯ್

ಕನ್ನಡ ಇಮ್ಮುಖ ಕುರುಡೋದು (Double Blind)
ಮತ್ತು ದಟ್ಟೋದು (Peer Review)
ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೩

ಜುಲೈ-ಸೆಪ್ಟೆಂಬರ್ ೨೦೨೫

Kannada Online Double Blind Peer-Review Quarterly Research Journal

Volume-2, Number-3 July-September 2025

ಕಟ್ಟುಗ
ಬಸವರಾಜ ಕೋಡಗುಂಟಿ

ಬಂಡಾರ ಪ್ರಕಾಶನ
ಮಸ್ಕಿ

**ಆರಯ್**
ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು
(Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ
ಸಂಪುಟ–೨, ಸಂಚಿಕೆ–೩, ಜುಲೈ–ಸೆಪ್ಟೆಂಬರ್ ೨೦೨೫
ISSN : 3048-7137

**ARAY**
Kannada Online Double Blind Peer-Review Quarterly
Research Journal
Volume-2, Number-3, July-September 2025
https://aray.in/

ಪುಟ/Pages : 130
ಹಕ್ಕು/@: ಪ್ರಕಾಶಕರು
ಬೆಲೆ/Price : **ರೂ. 50/–**

ಸಂಪಾದಕ
**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ
**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ
**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**
**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ
**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**
**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ
**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**
**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು
**ಪರಶುರಾಮ ಕೋಡಗುಂಟಿ**
ಪ್ರಕಾಶಕ, ಬಂಡಾರ ಪ್ರಕಾಶನ
ಮಸ್ಕಿ–೫೮೪ ೧೨೪, ಜಿ. ರಾಯಚೂರು
ಕರೆ–೯೧ ೯೮೮೬೪ ೦೭೦೧೧
bandaraprakashana@gmail.com
https://bandaraprakashana.com

# ಪ ರಿ ವಿ ಡಿ


| | |
|---|---|
| ಜಾನಪದ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ<br>**ಗಂಗಾಧರ ದೈವಜ್ಞ** | **4-25** |
| ಕೇಳಿಕೆ ರಂಗಭೂಮಿ ಹಿನ್ನೆಲೆಯಲ್ಲಿ ಗಡಿಪ್ರದೇಶದ ಜನಪದ ರಂಗಪ್ರಕಾರಗಳು ಮತ್ತು ದ್ರಾವಿಡ ರಂಗಭೂಮಿಯ ಪರಿಕಲ್ಪನೆ<br>**ವೇಮಗಲ್ ನಾರಾಯಣಸ್ವಾಮಿ** | **26-49** |
| ಬಯಲಾಟದಲ್ಲಿ ಬಹು ಭಾಷಾ ಬಳಕೆ<br>**ಹೆಚ್.ಡಿ.ನರಸೇಗೌಡ** | **50-67** |
| ಬಯಲಾಟ ಕಲಾವಿದ ಜಡೆ ದೊಡ್ಡಬಸಪ್ಪ<br>**ಗಾದೆಪ್ಪ** | **68-78** |
| ಬಯಲಾಟಗಳಲ್ಲಿ ದ್ವಿ ಭಾಷಿಕತೆ<br>**ಇಮಾಮ್‌ಸಾಬ ಹಡಗಲಿ** | **79-87** |
| ಕನ್ನಡ ಬಯಲಾಟ ಪರಿಸರ ಮತ್ತು ಪ್ರೇರಣೆ<br>**ಹುಲುಗಪ್ಪ ಎನ್.ಎಚ್** | **88-99** |
| ತೊಗಲು ಗೊಂಬೆ ಆಟ<br>**ರುದ್ರಮುನಿ ಹೀರೆಮಠ** | **100-117** |
| ಕೋಲಾರ ಜಿಲ್ಲೆಯ ಕೇಳಿಕೆಗಳ ವೈಶಿಷ್ಟ್ಯತೆ<br>**ನಟರಾಜ ಬಿ.ಎನ್.** | **118-130** |

ISSN : 3048-7137

# ಬಯಲಾಟದಲ್ಲಿ ಬಹು ಭಾಷಾ ಬಳಕೆ

ಹೆಚ್.ಡಿ.ನರಸೇಗೌಡ

**ಸೂಚಕ ಪದಗಳು**

ಬಯಲಾಟ, ಜನಪದ ರಂಗಭೂಮಿ, ಬಹುಭಾಷಾ ಬಳಕೆ, ಸಾಮಾಜಿಕ ಸಾಂಸ್ಕೃತಿಕ ಪರಂಪರೆ.

**ಸಾರಲೇಖ**: ಬಯಲಾಟವು ಕನ್ನಡ ಜನಪದ ರಂಗಭೂಮಿಯ ಪ್ರಮುಖ ಪ್ರದರ್ಶನ ಕಲೆಯಾಗಿದೆ, ಇದು ದೇವತಾರಾಧನೆ, ಆಚರಣೆ, ಕುಣಿತ, ಸಂಗೀತ, ಅಭಿನಯ, ವೇಷಭೂಷಣ, ಶ್ಲೋಕಪಾಠ ಮತ್ತು ಸಾಮಾಜಿಕ ಸಂಭಾಷಣೆಗಳೊಂದಿಗೆ ಜನಸಮುದಾಯಕ್ಕೆ ಮನೋರಂಜನೆ ಮತ್ತು ಭಕ್ತಿಯ ಅನುಭವ ಒದಗಿಸುತ್ತದೆ. ಬಯಲಾಟದ ಪಠ್ಯಗಳಲ್ಲಿ ಬಹುಭಾಷಾ ಬಳಕೆ ಸ್ಪಷ್ಟವಾಗಿ ಕಾಣುತ್ತದೆ; ಕನ್ನಡದ ಜೊತೆಗೆ ತೆಲುಗು, ತಮಿಳು, ಮಲಯಾಳಂ, ಉರ್ದು, ಸಂಸ್ಕೃತ ಪದಗಳು ಹಾಗೂ ಸ್ಥಳೀಯ ನುಡಿಗಳು ಪಾತ್ರಧಾರಿಗಳ ಮುಖಾಂತರ ಪ್ರಸ್ತುತಪಡಿಸಲಾಗುತ್ತವೆ. ತುಮಕೂರು, ಮಡಕಶಿರಾ, ಹೊಸಕೋಟೆ, ಛತ್ರಪಾಳ್ಯ ಮುಂತಾದ ಪ್ರದೇಶಗಳಲ್ಲಿ ಇಂದಿಗೂ ನಿರಂತರವಾಗಿ ನಡೆಯುವ ಪ್ರಸಂಗಗಳು ಬಯಲಾಟದ ಸಾಂಸ್ಕೃತಿಕ ವೈಶಿಷ್ಟ್ಯತೆ, ಭಾಷಿಕ ವೈವಿಧ್ಯ ಮತ್ತು ಸಾಮಾಜಿಕ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ. ಈ ಕಲೆಯು ಮೂಲತಃ ದೇವತಾರಾಧನೆಯ ಆಚರಣೆಗಳಿಂದ ಉಂಟಾಗಿ, ಅನೇಕ ಜನಪದ ಕಲೆಯಿಂದ ಪ್ರೇರಿತವಾಗಿಯೇ ವಿಕಾಸ ಹೊಂದುತ್ತಾ, ಮನೋರಂಜನಾ ಹಾಗೂ ಸಾಮುದಾಯಿಕ ಕಾರ್ಯಕ್ರಮಗಳ ಮೂಲಕ ಜೀವಂತವಾಗಿದೆ.

ಸಹಜವಾಗಿ ಮಾನವ ಆದಿಯಿಂದಲೂ ಪ್ರಕೃತಿಯ ಆರಾಧಕ. ಅದರ ಒಡನಾಟದಿಂದಲೇ ಬೆಳೆದು ಬಂದವನು. ನಿಸರ್ಗ ಮಾತೆಯ ರಮಣೀಯ ಸೊಬಗನ್ನು ಸವಿಯುತ್ತಲೇ ಹಠಾತ್ತನೆ ಸಂಭವಿಸುತ್ತದ್ದ ನೈಸರ್ಗಿಕ ವಿಕೋಪ ಗಳನ್ನು ಕಣ್ಣಾರೆ ಕಂಡು ಅವುಗಳನ್ನು ಎದುರಿಸುತ್ತಾ ಜೀವನ ಬಂಡಿಯನ್ನು ಸಾಗಿಸಿಕೊಂಡು ಬಂದವನು. ಅನಿರೀಕ್ಷಿತವಾಗಿ ಘಟಿಸುತ್ತಿದ್ದ ಪಂಚಭೂತಗಳ ಅಟ್ಟಹಾಸವನ್ನು ಭಯಚಿತ್ತನಾಗಿ ಕಂಡವನು. ಪ್ರಕೃತಿಯ ಇಂತಹ ಸೌಮ್ಯ ಸ್ವಭಾವವನ್ನು, ರಮಣೀಯತೆಯನ್ನು, ಕೋಪತಾಪಗಳನ್ನು, ರುದ್ರನರ್ತನವನ್ನು, ವಿರಾಟರೂಪವನ್ನು ಶಾಂತಮಾಡಲು ಮಾನವನು ಪ್ರಕೃತಿ ಮಾತೆಯ ಪೂಜೆ, ನಿವೇದನೆಯಂತಹ ಆರಾಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರಬೇಕು.

ಮಾನವ ಶಕ್ತಿಗೆ ಮೀರಿದ ಒಂದು ಆಗೋಚರ ಶಕ್ತಿಯಿದೆ. ಆ ಶಕ್ತಿಯೇ 'ದೇವರು' ಎಂಬುದಾಗಿ ಜನಪದರು ನಂಬಿಕೊಂಡು ಬಂದಿದ್ದಾರೆ. ಅಂತಹ ದೇವರನ್ನು ಜ್ಞಾನದಿಂದ, ಪ್ರಾರ್ಥನೆಯಿಂದ, ದೈಹಿಕ ದಂಡನೆಯಿಂದ, ಉಪವಾಸದಿಂದ, ಭಕ್ತಿಯಿಂದ, ಭಜನೆಯಿಂದ, ಹರಕೆಯಿಂದ ಮತ್ತು ಪೂಜಾ ವಿಧಿ–ವಿಧಾನಗಳಿಂದಲೇ ಸಂತೃಪ್ತಿಗೊಳಿಸಬೇಕು ಎಂಬುದು ಜನಪದರ ಅಚಲವಾದ ನಂಬಿಕೆಯಾಗಿರಬೇಕು.

ಇಂತಹ ಆರಾಧನೆಯ ವಿಧಿವಿಧಾನಗಳೇ ಮುಂದೆ ಜನಪದರ ಕಲೆಗಳಾಗಿ ರೂಪು ತಳೆದಿವೆ. ಆರಾಧನೆ ಎಂಬುವುದು ಕೇವಲ ಉಪಾಸನೆಯಲ್ಲ, ಅಲ್ಲಿ ಹಾಡುವ, ಬೇಡುವ, ಕುಣಿಯುವ, ಅಡ್ಡ ಬೀಳುವ, ದೈಹಿಕವಾಗಿ ದಂಡಿಸಿಕೊಳ್ಳುವ ಅಥವಾ ಒತ್ತಾಯಿಸುವ ವಿಧಿಬದ್ಧ ಕ್ರಿಯೆಗಳಿರುತ್ತವೆ. ಇಲ್ಲಿನ ಕ್ರಿಯೆಗಳೆಲ್ಲವು ಹಲವು ಆಂಗಿಕ ಅಭಿನಯಗಳ ಮೂಲಕ ಅಭಿವ್ಯಕ್ತಗೊಳ್ಳುತ್ತಿರುತ್ತವೆ. ಯಾವುದೇ ಜನಪದ ಕಲೆಗಳ ಮೂಲವನ್ನು ಭೇದಿಸಲು ಹೊರಟಾಗ ಆರಂಭದಲ್ಲಿ ಮಾತಿನ ಮೂಲಕ ಅಭಿವ್ಯಕ್ತಿಸಿದ ಅನುಭವಕ್ಕಿಂತ ಆಚರಣೆಗಳ, ಆರಾಧನೆಗಳಂತಹ ಕ್ರಿಯೆಗಳ ಮೂಲಕ ಅಭಿವ್ಯಕ್ತಿಸಿದ್ದೇ ದಟ್ಟವಾಗಿ ಕಾಣುತ್ತದೆ. ವಿಶೇಷವಾಗಿ ಅನುಕರಣೆಯಿಂದಲೇ ಇಂತಹ ಕಲೆಗಳು ಪರಂಪರಾನುಗತವಾಗಿ ಬೆಳೆದು ಬಂದಿವೆ. ಹೀಗೆ ಮೂಲದಲ್ಲಿ ಅನುಸರಿಸುತ್ತಿದ್ದ ಆಂಗಿಕ ಚಲನೆ, ಕುಣಿತ, ಸಂಗೀತ, ವೇಷಭೂಷಣಗಳು, ಅಭಿನಯ, ಆಹಾರ್ಯ, ದೀರ್ಘ ಸಮಯ ಮುಂತಾದ ಅಂಶಗಳು ಮಾನವನ ಜೀವನ ಸರಪಳಿಯಲ್ಲಿ ಕಾಲಕ್ಕೆ ಸಂದರ್ಭ–ಸನ್ನಿವೇಶಗಳಿಗೆ ಅನುಸಾರವಾಗಿ ಒಳಹೊಕ್ಕು ಆರಾಧನೆ, ಆಚರಣೆಗಳನ್ನು ಜನಪದರು ಮೈಗೂಡಿಸಿ ಕೊಳ್ಳುತ್ತಾ ಬಂದಿರಬಹುದು. ಭಕ್ತಿಯ ಅನನ್ಯತೆಯನ್ನು ಅಭಿವ್ಯಕ್ತಿಗೊಳಿಸುತ್ತಾ

ISSN : 3048-7137

ಜನಪದರಿಗೆ ಮನೋರಂಜನೆಯನ್ನು ಒದಗಿಸುತ್ತಾ ಸಾಮುದಾಯಿಕ ಸ್ವರೂಪ ಪಡೆದುಕೊಂಡು ಬಂದಿರುವ ಅಂಶಗಳು ಜನಪದ ರಂಗಭೂಮಿಯ ಉದಯಕ್ಕೆ ಕಾರಣವಾಗಿರುತ್ತವೆ ಎಂದು ಊಹಿಸಬಹುದು.

ಹೀಗೆ ದೇವತಾರಾಧನೆಯ ಸಂಸ್ಕೃತಿಯ ಚಿಂತನೆಯ ನೆಲೆಗಟ್ಟಿನಲ್ಲಿ ಸೃಷ್ಟಿಗೊಂಡ ಜನಪದ ರಂಗಭೂಮಿಯ ಒಂದು ಪ್ರಕಾರವೆಂದರೆ ಬಯಲಾಟ. ಈ ಬಯಲಾಟವೆಂಬ ರಂಗ ಪ್ರದರ್ಶನ ಕಲೆಗೆ ಅನೇಕ ಪೂರಕವಾದ ಅಂಶಗಳು ಸಮೀಕರಣಗೊಂಡು ಒಂದು ಆಚರಣಾ ವಿಧಾನವಾಗಿ, ನಂತರ ವಿಕಾಸ ಹೊಂದುತ್ತಾ ಮನೋರಂಜನಾ ಕಲೆಯಾಗಿ, ರೂಪಾಂತರದ ನೆಲೆಯಾಗಿ ಇಂದಿಗೂ ಜೀವಂತವಾಗಿರುವುದನ್ನು ಕಾಣಬಹುದು. ಬಯಲಾಟದ ಸೃಷ್ಟಿಗೆ ಹಲವಾರು ಜನಪದ ಕಲೆಗಳು ಪ್ರೇರಣೆ ಒದಗಿಸಿರಬಹುದು. ತಮಟೆ, ನೃತ್ಯ, ಅರೆನೃತ್ಯ, ಕೋಲಾಟ, ಮಾರಿಕುಣಿತ, ಸುಗ್ಗಿಹಾಡು, ಕೋಲೇಬಸವನ ಆಟ, ಜನಪದ ಕಥನಕಾವ್ಯಗಳ ಗಾಯನ, ತತ್ವಪದ ಗಾಯನ, ಭಜನೆಮೇಳ, ವೀರಗಾಸೆ, ಪುರವಂತರ ಕುಣಿತ, ಕರಪಾಲ ಮೇಳ, ಬುರ್ರಕಥಾ, ಮಣೇವು ಕಟ್ಟುವಿಕೆ, ಭೂತಪ್ಪನ ಸೇವೆ ಹೀಗೆ ನಾನಾ ತರದ ಜನಪದರ ಆರಾಧನಾ ಚಟುವಟಿಕೆಗಳು ಬಯಲಾಟದ ಉಗಮ ಮತ್ತು ವಿಕಾಸಕ್ಕೆ ಕಾರಣವಾಗಿರಬಹುದೆಂದು ನಂಬಬಹುದು.

ಬಯಲಾಟವು ಆದಿಯಲ್ಲಿ ಪ್ರಕೃತಿಯ ಮಡಿಲಲ್ಲಿ ಚಿಗುರೊಡೆದು ನಂತರ ಆಚರಣೆಯ ಸಂದರ್ಭದಲ್ಲಿ ಪೂಜಾಸ್ಥಳ, ಗುಡಿ, ಮಂದಿರಗಳ ನಡುವೆ ಸೀಮಿತ ಸ್ಥಳದಲ್ಲಿ ಚಿಗುರೊಡೆದು ಕಾಲಾ ನಂತರ ಜನವಸತಿ ಪ್ರದೇಶವನ್ನು ಪ್ರವೇಶಿಸಿ ಮನೋರಂಜನಾತ್ಮಕ ಪ್ರದರ್ಶನ ಕಲೆಯಾಗಿ ರೂಪುಗೊಂಡಿರಬಹುದು. ಬಯಲಾಟಕ್ಕೆ ಅರ್ಥವ್ಯಾಖ್ಯಾನ ಮಾಡುವುದಾದರೆ 'ಕುಣಿತ, ಸಂಗೀತ, ಸಾಹಿತ್ಯ, ಸಂಭಾಷಣೆ, ಬಣ್ಣಗಾರಿಕೆ, ವಸ್ತ್ರವಿನ್ಯಾಸ, ಅಭಿನಯ, ದೀರ್ಘಾವಧಿ ಸಮಯ (ರಾತ್ರಿಪೂರ), ರಂಗಮಂಟಪ ಮತ್ತು ಅಪಾರ ಪ್ರೇಕ್ಷಕವರ್ಗ ಮುಂತಾದ ಅಂಶಗಳನ್ನು ಮೈಗೂಡಿಸಿಕೊಂಡು ಜನಸಮುದಾಯಕ್ಕೆ ಆರಾಧನೆ, ಆಚರಣೆಗಳ ಜೊತೆ–ಜೊತೆಗೆ ದೈವಭಕ್ತಿ, ಮನೋರಂಜನೆಯನ್ನು ಒದಗಿಸುವ ರಂಗಪ್ರದರ್ಶನ ಕಲೆಯೇ ಬಯಲಾಟ ಎಂದು ಹೇಳಬಹುದು'.

ಬಯಲಾಟವು ಉತ್ತರ ಭಾರತದಲ್ಲೂ ಪ್ರದರ್ಶನಗೊಳ್ಳುತ್ತಿದ್ದಾಗಿ ಸಂಶೋಧಕರಾದ ಕೆ.ಆರ್. ದುರ್ಗಾದಾಸ್‌ರವರು ಗುರ್ತಿಸಿದ್ದಾರೆ. ಇದನ್ನು ಹಲವಾರು ಪ್ರಾಂತ್ಯಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುತ್ತಿದ್ದರೆಂದು ತಿಳಿಸಿದ್ದಾರೆ. ಉತ್ತರ ಪ್ರದೇಶದಲ್ಲಿ 'ರಾಮನಾಟ್ಯಂ' ಎಂತಲೂ, ಮಥುರಾ

ಭಾಗದಲ್ಲಿ 'ಕೃಷ್ಣಲೀಲಾ' ಎಂತಲೂ ಕರೆಯುತ್ತಿದ್ದರೆಂದು ಉಲ್ಲೇಖಿಸಿದ್ದಾರೆ. (ಬಳ್ಳಾರಿ ಜಿಲ್ಲೆಯ ಬಯಲಾಟಗಳು) ಅಂತೆಯೇ ದ್ರಾವಿಡ ನೆಲೆಗಳಾದ ತಮಿಳುನಾಡಿನಲ್ಲಿ 'ತೆರುಕೊತ್ತು' ಎಂತಲೂ, ಕೇರಳದಲ್ಲಿ 'ಕೂಡಿಯಾಟ್ಟಂ' ಎಂತಲೂ, ಆಂಧ್ರದಲ್ಲಿ 'ವೀಧಿನಾಟಕಂ' ಎಂತಲೂ, ಕರ್ನಾಟಕದಲ್ಲಿ 'ಬಯಲಾಟ ವೆಂತಲೂ' ನಾಮಾಂಕಿತಗೊಂಡಿರುವುದು ಸಂಶೋಧನೆಗಳಿಂದ ತಿಳಿದುಬರುತ್ತದೆ.

ಕರ್ನಾಟಕದಲ್ಲಿ ಬಯಲಾಟವನ್ನು ಪ್ರಾದೇಶಿಕವಾಗಿ ಗಮನಿಸಿದಾಗ ಎರಡು ಪ್ರಮುಖ ಘಟ್ಟಗಳಾಗಿ ವಿಂಗಡಿಸಬಹುದು. ಕರಾವಳಿ ಭಾಗದ ಪಡುವಲಪಾಯ ಯಕ್ಷಗಾನ (ಬಡಗು, ತೆಂಕು, ಬಡಾಬಡಗು) ಹಾಗೂ ಬಯಲು ಸೀಮೆಯ ಮೂಡಲಪಾಯ ಯಕ್ಷಗಾನ (ಬಯಲಾಟ) ಎಂದು ವಿಭಾಗಿಸಿರುವುದನ್ನು ಕಾಣಬಹುದು. ಮೂಡಲಪಾಯ ಯಕ್ಷಗಾನದಲ್ಲಿ ಇತರೆ ಕವಲುಗಳಿರುವುದನ್ನು ಗಮನಿಸಬಹುದು. ಕರ್ನಾಟಕದ ಬಯಲು ಸೀಮೆಯ ಜಿಲ್ಲೆಯಾದ ಬಳ್ಳಾರಿಯನ್ನು ಕೇಂದ್ರವಾಗಿಟ್ಟುಕೊಂಡು ಉತ್ತರಕ್ಕೆ ದೊಡ್ಡಾಟ, ಬಯಲಾಟ, ಸಣ್ಣಾಟ, ಕೃಷ್ಣ ಪಾರಿಜಾತ, ರಾಧಾನಾಟ, ರಾಜಾನಾಟ, ದಾಸರಾಟ ಎಂಬ ಪ್ರಕಾರಗಳಿವೆ. ದಕ್ಷಿಣಕ್ಕೆ ತುಮಕೂರು, ಚಿತ್ರದುರ್ಗ, ಹಾಸನ, ಬೆಂಗಳೂರು ಭಾಗದಲ್ಲಿ ಮೂಡಲಪಾಯ ಎಂತಲೂ ಮಂಡ್ಯ, ಮೈಸೂರು ಭಾಗದಲ್ಲಿ ಘಟ್ಟದಕೋರೆ ಎಂತಲೂ, ಕೋಲಾರ, ಆನೆಕಲ್ಲು ಭಾಗದಲ್ಲಿ 'ಕೇಳಿಕೆ' ಎಂತಲೂ ಕರೆಯುತ್ತಾರೆ.

ಪ್ರಾಚೀನ ಕಾಲಕ್ಕೆ ಬಯಲಾಟವು ಅಚ್ಚ ದ್ರಾವಿಡ ಕಲೆಯಾಗಿತ್ತು ಎಂಬುದಕ್ಕೆ ಇಲ್ಲಿನ ಪ್ರಸಂಗ ಪಠ್ಯಗಳು, ಪ್ರದರ್ಶನದ ರೀತಿ, ಆದಿಯಿಂದಲೂ ಅನುಸರಿಸಿಕೊಂಡು ಬಂದಿರುವ ಸಂಪ್ರದಾಯಗಳು, ದೈವೀ ಶಕ್ತಿಗಳಿಗೆ ನೀಡುವ ಬಲಿಗಳು, ರಂಗಮಂಟಪದ ಪರಿಕಲ್ಪನೆ, ಸಾಂಸ್ಕೃತಿಕ ಅನನ್ಯತೆಗಳು, ಭಾಷಿಕ ಸಂಬಂಧಗಳು, ಗಡಿನಾಡಿನ ಸಂಸ್ಕೃತಿಯ ಪರಂಪರೆಗಳ ಅನಾವರಣ ಮುಂತಾದ ಅಂಶಗಳು ಇದರ ವೈಶಾಲ್ಯತೆಯನ್ನು ತೆರೆದಿಡುತ್ತವೆ.

ಮುಖ್ಯವಾಗಿ ಭಾಷಿಕ ನೆಲೆಯಲ್ಲಿ ಬಯಲಾಟಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಪಠ್ಯಗಳಲ್ಲಿ ಕಂಡುಬರುವ ಬಹು ಭಾಷಿಕತೆ, ನುಡಿಗಟ್ಟುಗಳು, ಗಾದೆಮಾತುಗಳು, ಗ್ರಾಮ್ಯನುಡಿಗಳು, ಶ್ಲೋಕಗಳು ಹಾಗೂ ಕನ್ನಡ ಮಾತ್ರವಲ್ಲದೆ ತೆಲುಗು, ತಮಿಳು, ಮಲಯಾಳಂ, ಉರ್ದು, ಸಂಸ್ಕೃತ ಭಾಷೆಗಳ ಬಳಕೆಯ ಜೊತೆಗೆ ಭಾಷಾ ಬಾಂಧವ್ಯ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಗುರ್ತಿಸಬಹುದು.

ISSN : 3048-7137

ವಿಶೇಷವಾಗಿ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಹನುಮಂತಪುರದಲ್ಲಿ ಈಗಲೂ ಪ್ರದರ್ಶನಗೊಳ್ಳುತ್ತಿರುವ 'ದೇವಿ ಮಹಾತ್ಮೆ' ಬಯಲಾಟ (ಮೂಡಲಪಾಯ ಯಕ್ಷಗಾನ) ಹಸ್ತಪ್ರತಿಯಲ್ಲಿ ಬಹು ಭಾಷಾ ಅಸ್ತಿತ್ವವಿರುವುದು ಕಂಡುಬರುತ್ತದೆ.

**ಶಾರದೆ ಮಾತು :** ಹೇ ಸೂತ್ರಧಾರ್ ಮೈ ಸತ್ಯಲೋಕಮೆ। ಪಿತಾಜಿಕೆ ಆಂಗೋಫಿರ್ ಮಯೂರ ನಸಿನರ್ತನ ಕಥತಿಕಕ್। ಪ್ರೇರಾಸ್ತುತಿ ಆವಾಜುಂಹೈ ಹೇರಂಗಮಂಟಪ್। ಚಲಿ ಆಗಾಯಿತೆ ಕಿಕ್। ಕ್ಯಾಸಂಗಟ್ ಪ್ರಾಟ್ ಕಹೈ ಕಹೋ ಸೂತ್ರಧಾರ್।

**ಸೂತ್ರಧಾರಿ ಮಾತು :** ಮಾಯಿ ಸರಸ್ವತಾ। ರಂಗಫರ್ ನಾಟಿಕರ್। ಚಲೇ ಆಗಾಯಿತೆ ಕಿಕ್ ಕ್ಯಾಸಂಗಟ್ ಪ್ರಾಟ್ ಕಹೋ ಸರಸ್ವತಾ।

**ಶಾರದೆ ಮಾತು :** ಹೇ ಸೂತ್ರಧಾರ್ ॥ ಶ್ಲೋಕ॥ ಮೂಕಂ ಕರೋತಿ ವಾಚಾಲಂ। ಪಂಗುಂ ಲಂಗಯತೇ ಗಿರಿಂ। ಯತ್ಕೃಪಾ ತಮಃ। ವಂದೇ ಪರಮಾನಂದ ಮಾಧವಂ। ಹೇ ಸೂತ್ರಧಾರ್ ಈ ಸಭಾ ಹೈಸೆ ಆನಂದ ಸಿಬೈಟಿ ಹೈ। ಕೋನ್‌ಸೆ ಬಸ್ತಿ ಕೋನ್‌ಸೆ ಕವಿತಯಾರ್ ಯಾರ್ ಕಿಹಾ। ಕಹೈ ಕಹೋ ಸೂತ್ರಧಾರ್।

**ಸೂತ್ರಧಾರಿ ಮಾತು :** ಮಾಯಿ ಸರಸ್ವತಾ। ಶ್ರೀಮನ್ ಚಾಮರಾಜ್ ಕೂ। ಮೈಸೂರ್ ದೇಶ್ಮೆ ಐಸೋ। ಶೇಷಗಿರಿ ವೆಂಕಟೇಶ ಅಂಕಿತಮಾ। ರಕ್ತ ಬಿಜಾಸುರ ನಾಟಿಕಾ। ಹಮಾರೆ ಹೋಕೆ । ಸಬ್ ದುನಿಯಾಮೆ ಆಯಂಗ್ಮೆ ಖ್ಯಾತಿಕೋ ಸರಸ್ವತಾ।

**ಶಾರದೆ ಮಾತು :** ಹೇ ಸೂತ್ರಧಾರ್। ತುಮೆ ಕರಿನ್‌ಸೋ।ರಕ್ತ ಬಿಜಾಸುರ ನಾಟಿಕಾ। ಸಲೇ ಚರಿಕಾ ಮಹರ್‌ದಿನ್। ಕರ್ಲೆ ಜಾವ್ ಸೂತ್ರಧಾರ್। ಹೇ ಸೂತ್ರಧಾರ್ ಅಬ್ಬಿ ಮೇ ಸತ್ಯಲೋಕಂಕು। ನಿಕಲ್ ಜಾತಿಹೋ ಸೂತ್ರಧಾರ್.

**ಸೂತ್ರಧಾರಿ ಮಾತು :** ಮಾಯಿ ಸರಸ್ವತಾ। ತುಮೆ ಸತ್ಯಲೋಕಂಕು ಚಲೋ ಆಫ್ ಮಾಯಿ ಸರಸ್ವತಾ।

ಇದೇ ಪ್ರಸಂಗ ಪಠ್ಯದಲ್ಲಿ ಅಡಕವಾಗಿರುವ ಸಾಕಷ್ಟು ಸಂಸ್ಕೃತ ಶ್ಲೋಕಗಳನ್ನು ಕಾಣಬಹುದು.

**ರುಕ್ಮಿಣಿ ಮಾತು:** ॥ಋಣಾನುಬಂಧಂ ರೂಪೇಣಾಂ। ಪಶುಪತ್ನಿ ಸುತಾಲಯಃ। ಋಣಕ್ಷಯೋ ಕ್ಷಯಂತಿ ಕಾಕತ್ರ ಪರಿವೇದನಂ॥

**ಶ್ಲೋಕದ ಅರ್ಥ:** ಋಣ ಸಂಬಂಧ ಇರುವ ಪರಿಯಂತರ ಪಶುಗಳು,

ಹೆಂಡತಿ, ಮಕ್ಕಳು, ದ್ರವ್ಯ ಮೊದಲಾದ್ದು ಜಯಿಸಿ ಬರುವುದು ಋಣ ತಪ್ಪಿದ ಮೇಲೆ ಎಲ್ಲಾ ವ್ಯರ್ಥವಾಗಿ ಹೋಗುವುದು.

**ಕೃಷ್ಣನ ಶ್ಲೋಕ:** ॥ಜಾತ:ಬ್ರಹ್ಮ ಕುಲಾಗ್ರಜೋ ಧನಪತೇಯ: ಕುಂಭ ಕರ್ಣಾನುಜಃ। ಪುತ್ರಂ ಇಂದ್ರಜಿತು। ಸ್ವಯಂ ದಶಶಿರಂ। ಪೂರ್ಣಮಾಂಬುಜೆ ವಿಂಶತೇ। ದೈತ್ಯಃ ಕಾಮಚರೋರತಸ್ತು। ವಿಜಯೋ ಮಧ್ಯೆ ಸಮುದ್ರ ಗೃಹಂ। ಸರ್ವ ನಿಷ್ಪಲಿತಂತು। ವಿಧಿಯುಂ ನಾಂ ದೈವಬಲೇ ದುರ್ಬಲೆ॥

**ಶ್ಲೋಕದ ಅರ್ಥ :** ಜಾತಿಯಲ್ಲಿ ಬ್ರಹ್ಮ ವಂಶಜನು। ಕುಬೇರನೂ ಕುಂಭಕರ್ಣ ರಾವಣ ಅಣ್ಣ ತಮ್ಮಂದಿರು। ದೇವೇಂದ್ರನಂ ಜಯಿಸಿದ ಇಂದ್ರಜಿತು ಅವನ ಮಗ। ಹತ್ತು ಶಿರ ಇಪ್ಪತ್ತು ಭುಜ। ರಾಕ್ಷಸ ರೂಪು। ವಾಯು ವೇಗ ರಣಸಂಪನ್ನ। ಇಂಥಾ ಐಶ್ವರ್ಯವುಳ್ಳ ರಾವಣನಿಗೆ ದೈವಬಲಿ ಒದಗಿತಲ್ಲಾ.

ಹಾಗೆಯೇ ಇದೇ ಪಠ್ಯದಲ್ಲಿ ಕನ್ನಡದ ಸೋದರ ಭಾಷೆ ತೆಲುಗು ಭಾಷೆಯ ದರುವಿನ ಪ್ರಾತಿನಿಧಿಕತೆಯಿರುವುದನ್ನು ಗಮನಿಸಬಹುದು.

**ಬೇಟೆಗಾರರ ದರುವು:** ಬ್ಯಾಟರಾಯ ಸ್ವಾಮಿ ದೇವುಡಾ। ನಾಯೆಲ್ಲಿವಾಡ ಬ್ಯಾಟರಾಯ ಸ್ವಾಮಿದೇವುಡಾ। ಕಾಟಿಮಿ ದೇವುಡಾ। ಕದರಿ ನರಸಿಂಹುಡಾ। ನೀಟೈನ ಮೇಲುಕೋಟಿ ನಿನ್ನೇ ನಮ್ಮಿತಿರಾ ॥ಬ್ಯಾಟರಾಯ॥ ಕೆಂಚ ಬಾರಲೋ। ಮಾರ ಬಾರಲೋ। ಸಿದ್ದಮಲ್ಲ ಎಲ್ಲ ಸೇರಿ। ಬ್ಯಾಂಟೆಯಾಡುವಾ ॥ಬ್ಯಾಟರಾಯ॥

ಇತರೆ ಭಾಷೆಗಳ ಬಳಕೆಯಿರುವ ಸಾಹಿತ್ಯವು ಪಾತ್ರಧಾರಿಗಳ ಮುಖೇನ ಇದೇ ಪ್ರಸಂಗದಲ್ಲಿ ಪರಿಚಯವಾಗುವುದನ್ನು ನಾವಿಲ್ಲಿ ಗಮನಿಸಬಹುದು.

**ಸುಗ್ರೀವನ ಮಾತು:** ಅಡಾಚಾರ ನೀನಿಂಗವಾಡ। ರಾಜ ರಕ್ತಬಿಜಾಸುರನ ಕಡಪಂ ಪೋಗಿ ।ನಾವಂದ ವಾರ್ತೆ। ನೀಡು ಚೆಳ್ಳುಟ್ಟುವಾಡ। ಅಡಾಚಾರ।

**ಚಂಡಾಸುರನ ಮಾತು :** ಅಜಿಹೋ ಚೋಪ್‌ದಾರ್। ಸುನೋಜೀವೊ ಕೋಪ್‌ದಾರ್। ಹಮಾರ ರಕ್ತಬಿಜಾಸುರನೇ। ಪಾಸ್ಕೆ ಜಾತೋ। ದೈತ್ಯ ಶಿಖಾಮಣಿ। ಚಂಡಾಸುರ ಭೂಪ। ಆಯಕರ್ಕು ಬೋಲ್ಕೋ। ಬೇಗೇ ಅವ್‌ಮಿಯಾ ಚೋಪ್‌ದಾರ್। ಬಹುತ್ಕುದಾರ್।

**ಮಹಿಷಾಸುರನ ಪೀಠಿಕೆ :** ವೊರೆ ಭಟಾಗ್ರಣ್ಯುಡಾ ಇಟುರಾ। ಇಟಿದೇವ ತೋರ್ಪುಡಿ ಜಡುಗು। ರಾಜ ರುದಿರಬೀಜ ಸನ್ನಿಧಿಕ ಪೋಯಿ। ನೇನು ವಚ್ಚಿನ ರ್‍ಯಾಕು ನೆಲಪಲಿಕಿ ರಾರಾ। ಧೀರಾಯತಪಿ ಶೂರಾ॥

ISSN : 3048-7137

**ನಿಶುಂಭಾಸುರನ ಪೀಠಿಕೆ :** ಎಲೇ ದ್ವಾರಪಾಲಕ। ಹಮ್ ರಕ್ತಬೀಜಾಸುರ ಸನ್ನಿಧಾನಿಂಚೆ। ಜಾವುನೇ ರಾಜ। ತುಂ ನಿಶುಂಭಾಸುರಾ ಭೂಪಾಲ। ಅಲಾಹೇಮಣೋ ಸಾಂಗೋರೆ ದ್ವಾರಪಾಲಕ॥

**ಮಾಯಾವಿಸುರನ ಪೀಠಿಕೆ :** ಅಜಿಹೋ ಚೋಪ್‌ದಾರ್। ಸುನೋಜಿವೊ ಕುಪ್‌ದಾರ್। ಹಮಾರ್ ಭಾವಾ ರಕ್ತ ಬಿಜಾಸುರನ್ಕೆ ಜಾತು। ಕುಮಾರ ಭೇಟಿ ಆಯಾಕರ್ಕು ಬೋಲ್ಕೋ। ಬೇಗಿ ಆವ್‌ಮಿಯಾ ಚೋಪ್‌ದಾರ್। ಬಹುತ್ಕಾದಾರ್।

ಮತ್ತೊಂದು ಪ್ರಸಂಗ ಪಠ್ಯವಾದ 'ರಾಜಾ ಸತ್ಯವರ್ಮ' ಅಥವಾ 'ಶನಿ ಪ್ರಭಾವ' ಎಂಬ ಪ್ರಸಂಗ ಪಠ್ಯದಲ್ಲಿ ಕಂಡು ಬರುವ ಕನ್ನಡ–ತೆಲುಗಿನ ಭಾಷಾ ನೆಲೆಯನ್ನು ಗುರ್ತಿಸಬಹುದು.

**ಒಂದನೇ ಕಳ್ಳನ ಪದ:** ದಾಂಡ್ರಾ ಪೋದಾಮು ವೇಡಾಟಕೀಗಾಲೆ ದಾಂಡ್ರಾ ಪೋದಾಮು। ವೇಟಾಲು ಚಿಕ್ಕಕುಂಟೆ ತೋಟಾಲು ಪಾಡ್ಜೇಸ್ದಾಮು ॥ದಾಂಡ್ರಾ॥

**ಎರಡನೇ ಕಳ್ಳನ ಪದ:** ಅದಿಗೋರಾ ಗುಂಟಾನಕ್ಕಾ। ತೋಡಿಂದಿರ ಪೆದ್ದಬಕ್ಕಾ ತಾಳ್ರ ನೀಯಕ್ಕ ಚಲ್ಲುಲು ಮೂಡಿಂದಿ॥ ದಾಂಡ್ರಾ।

**ಒಂದನೇ ಕಳ್ಳನ ಮಾತು:** ಅಲೆ ಅಂದು ಚೂಡಲೆ ಎಂತ ಪಡುವು ಎಂತ ಉದ್ದಮು ಬಕ್ಕ ತೋಡಿಂದಿ ಚೂಡ್ರಾ।

**ಎರಡನೇ ಕಳ್ಳನ ಮಾತು:** ಅಲಲೇ ಇಂದು ಚೂಡಲೇ। ಈಡೇ ಪಾರಾಡಿ ಈ ಬಕ್ಕಲೋನೇ ಫಲಿಕಿಪ್ಯೆಯಿಂದಿಗಮ್ಮಲೆ।

**ಒಂದನೇ ಕಳ್ಳನ ಮಾತು:** ಹೇಮಂಡ್ರಾ। ಮೂಡು ದಿನಮುಲ ಮುಂದುರ ದೊಂಗತನಮು ಚೇಸುಕೊನಿ ಪೈಯಿನ ಪಿಮ್ಮಟ । ದಿನಸುಲನ್ನಿ ಮುಗಿಸಿ ಪೋಯಿನಾವಿ। ಮಾ ಪೆಂಡ್ಲಾಮು ಬಿಡ್ಡಲಕು ಆಕಲಿ ತೀರ್ಚುಟಕು। ಎವರಿಂಟಿಕೈನ ಪೋಯಿ ಸೊಮ್ಮುಲು ತೆಸ್ತಾಮು ದಾಂಡ್ರಾ।

**ಎರಡನೇ ಕಳ್ಳನ ಮಾತು:** ಅಲೇ ಅಂದು ಚೂಡಲೆ ತಳುಕು ಪುಳುಕು ಪೆಟ್ಟುಕೋನಿ ಆಡದಿ ಭಾಗವಸ್ತುಂದಿ ಪೋದಾಮು ದಾಂಡ್ರಾ.

**ಒಂದನೇ ಕಳ್ಳನ ಮಾತು:** ಪೋರ ಪೋರಾ ನೇನೇ ಪೆಂಡ್ಲಿ ಸೇಸ್ಕೋಂಟಾನು.

**ಎರಡನೇ ಕಳ್ಳನ ಮಾತು:** ಅಲಲೇ ಇಂದು ಚೂಡಲೆ ಆಡದಿ ದಗ್ಗರಿಕಿ ವಸ್ತಾವುಂದಿಗಮ್ಮಲೆ। ರವಂತ ಮರಗೈದಾಮು ದಾವಲೆ।

**ಭಾಗ್ಯವತಿ ಮಾತು:** ಅಣ್ಣಯ್ಯನವರೆ ನಿಮಗೆ ಶರಣು ಮಾಡುವೆ. ತಾವು ಧಾರು ತಂದೆ।

**ಒಂದನೇ ಕಳ್ಳ:** ನಾವು ಕಳ್ಳರು

**ಎರಡನೇ ಕಳ್ಳ:** ಮೇಮು ದೊಂಗಲು.

**ಭಾಗ್ಯವತಿ ಮಾತು:** ಅಣ್ಣಯ್ಯನವರೆ ನಿಮ್ಮ ವಾಸಸ್ಥಳವೆಲ್ಲಿ.

**ಒಂದನೇ ಕಳ್ಳನ ಮಾತು:** ನಾವು ಕಾಡಿನಲ್ಲಿ ವಾಸಿಸ್ತೀವಿ.

**ಎರಡನೇ ಕಳ್ಳನ ಮಾತು:** ಮೇಮು ಅಡವಿಲೋ ಕೊಂಡಲ್ಲೋ ಉಂಟಾಮು.

**ಭಾಗ್ಯವತಿ ಮಾತು:** ಈ ಅರಣ್ಯದಲ್ಲಿ ನನ್ನ ಪತಿಯನ್ನು ಕಂಡಿರಾ.

**ಒಂದನೇ ಕಳ್ಳನ ಮಾತು:** ಇನ್ನೆಲ್ಲಿ ಪತಿಗಳು ಕಳ್ಳರೇ ಪತಿಗಳು.

**ಎರಡನೇ ಕಳ್ಳನ ಮಾತು:** ಮೇಮೇ ನೀ ಪತಿಯಲಾರು.

**ಕಳ್ಳರ ಪದ:** ದಾಮ್ಮ ಪೋದಾಮು ಮಾಯಿಂಟಿ ಕೀಗಲೆ ದಾಮ್ಮ ಪೋದಾಮು। ಪಡಕಿಂಟಿಲೋನ ಕಮ್ಮಂಗ ಉಂದಾಮು ॥ದಾಮ್ಮ॥ ವೇಳ್ಯಾಕಿ ಕೂಡುಲೇಕ ಕಟ್ಟೇಕಿ ಬಟ್ಟಲೇಕ ಕಾಡಡವಿಲೋನ ಯಾಲ್‌ಚಿಂತ ಚೇಸ್ತಾವು ॥ದಾಮ್ಮ॥ ಯಾವೇಳಾ ಚೂಸಿನ ಎಂಥಾ ಮಾಸೊಮ್ಮಲು। ದಂಡಿಗಾ ನೀಕಿಂತ ವಂಡೋಟಿ ಪೆಡ್ತಾಮು ॥ದಾಮ್ಮ॥

ಇದೇ ಪಥ್ಯದಲ್ಲಿ ಚಿತ್ರವ್ರತನೆಂಬ ನೇಪಾಳದ ಅರಸನ ವನದಲ್ಲಿ ಸಿಲುಕಿಕೊಂಡು ಭಾಗ್ಯವತಿ ಮತ್ತು ಚಿತ್ರವ್ರತರ ನಡುವಿನ ಸಂಭಾಷಣಾ ದರುವಿನ ಪ್ರಸಂಗ.

**ಭಾಗ್ಯವತಿ ಪದ:** ಪಾತಕಮಾನು ತೆಲಿಯಕ ನೀತಿವೀಡನಾಡಿ ಪೋರ ವನಿತೆಲ್ಲಗೋರುತ ನಿಧಿತರಮು॥

**ಚಿತ್ರವ್ರತನ ಪದ:** ಬಾರೆ ಬಾರೆ ಸುಂದರಿಯೆ ಚಂದಿರ ಮುಖವ ತೋರೆ ನೀರೆ ಶುಭಾಕರಿ ಬಾ ಬಾ ಬಾ॥

**ಭಾಗ್ಯವತಿ ಪದ:** ಪಾತಕಾವಲಿ ಘಾತಕಾ। ನೀತಿವೀಡಿನಾಡಿ ಪೋರ ಪಾತಕಮು ಚೇಯುಟ ವನಿತೆಲ್ಲಗೋರುತ ನಿದಿತರಮು॥

**ಚಿತ್ರವ್ರತನ ಪದ:** ಬಾರೆಲೆ ಕಂಬು ಕಂದುರಿ। ಮಾರನ ಕೇಳೀಗೆ ಈಗ ತಾಳಲಾರೆ ವಿರಹವ ಬಾ ಬಾ ಬಾ॥

ಇನ್ನು ಕರ್ಣಾರ್ಜುನರ ಕಾಳಗದಲ್ಲಿ ಒಮ್ಮೆ ಮಾತ್ರ ಒಂದು ಕಂದವು ತೆಲುಗಿನಲ್ಲಿ ಬರುವುದನ್ನು ಕಾಣಬಹುದು.

**ಕೌರವನ ಮಾತು ಸಾರಥಿಗೆ:** ಅಯ್ಯಾ ಸಾರಥಿ ಈ ಶಲ್ಯನು ಆಡಿದ ಮಾತುಗಳಂ ಕೇಳಿದೆಯಾ। ನೀನಾದರೂ ಕೆಲವು ಉಪಮಾನ ಉಪಶೃತಿಗಳಿಂದ ಪೇಳಿ ಸಾರಥಿಯಾಗಿ ಹೊರಡುವಂತೆ ಮಾಡ್ಯೆ ಚರನೇ।ಕೇಳ್ಯೆ ನರನೇ।

**ಕಂದ:** ವಿನುರಾ ಶಲ್ಯ ಮಹಾರಾಜು। ರಾಜಾಧಿರಾಜು ನಳಮಹಾರಾಜು। ಋತುಪರ್ಣನಿಕಿ ಸಾರಥಿಯೆಯ್ ವೆಲ್ಲಿನಾಡು। ತ್ರಿಶಂಕು ಪುತ್ರುಡೈನ ಸತ್ಯಹರಿಶ್ವಂದ್ರಡು। ಚಂಡಾಲನಿಕಿ ಸೇವ ಚೇಸೆ। ಈ ಸಮಯಂಬು। ಸಾರಥಿಗ ನೀವು। ಪೋಕಪೋತೆ। ಈ ಕೌರವ ರಾಜುನಕು। ದಿಕ್ಕೇಲೇರು॥

**ಸಾರಥಿ ಮಾತು:** (ಶಲ್ಯನಿಗೆ) ಅಯ್ಯಾ ಶಲ್ಯ ಮಹಾರಾಜು। ಏಕಚಕ್ರಾಧಿಪತ್ಯ ವನ್ನು ಆಳುತ್ತಿದ್ದ ನಳನು ಸಣ್ಣ ದೊರೆತನವು ಮಾಡುತ್ತಿದ್ದ। ಋತುಪರ್ಣನಿಗೆ ಸಾರಥಿಯಾಗಿ ಹೋಗಲಿಲ್ಲವೆ। ಸತ್ಯಸಂಧನಾದ ಹರಿಶ್ಚಂದ್ರನು ಚಂಡಾಲನ ಸೇವೆ ಮಾಡಿದನು। ಇದೆಲ್ಲವೂ ಹೀನವಾದುದೆಂದು ಭಾವಿಸಬಾರದು। ಕಾರ್ಯ ನಿನ್ನದಾಗಿರುತ್ತದೆ। ಈಗ ನೀನು ಸಾರಥಿಯಾಗಿ ಪೋಗದಿದ್ದರೆ। ಈ ಕೌರವನ ಗತಿ ವಿಚಾರಿಸುವರೇ ಇಲ್ಲದಾಗುತ್ತೆ। ಆದ್ದರಿಂದ ಯಾತಕ್ಕೆ ಕೋಪ ಮಾಡುತ್ತಿ ಹೊರಡು ಹೊರಡು।

ರಾಜಾವಿಕ್ರಮ ಅಥವಾ ಶನಿಮಹಾತ್ಮೆ ಪ್ರಸಂಗ ಪಠ್ಯದಲ್ಲಿರುವ ಅನ್ಯ ಭಾಷೆಯ ಸಾಹಿತ್ಯ ಇಂತಿದೆ.

**ಕಾರ್ವಾನ್ ಬರುವಿಕೆ ಪದಾ** : ಕೋನ್ರೆ ಗಾಂವ್ಮೆ ರಾಜ ಹೈ ಕ್ಯಾ । ಗೋಡೆ ಲೇಕಾ ಹೋ ರಾಜ ವುಟ್ಕೋ ಬೇಗಿ ಆಯೇ । ಜಲ್ದಿ ಜಾರೇ । ಮೈ ಜಾನವಾಲೆ ದೇಕ್ರೆ ಜಲ್ದಿ ತುಂ ಬುಲಾವೋ ॥ ಕೋನ್ರೆ॥

**ಮಾತು :** ಅರೆ ಹೋ ಭಾವ । ಕೋನ್ ಖಡೇಕ್ ಯೇ ಗಾವ್ ಮೇ ರಾಜ ಹೈಕಿ ನೈಕಿ ಕರ್ತಾ ಹೂಂ ಹಮಾರೆ ಘೋಡೆ ಅಚ್ಚ ತರಾಸಿ ಚಲ್ತಾಹೈ । ಪೂಚ್ ಕೆ ಹಾವ್ ಮಾಲುಂ ದೇತಾಹೈ ಕ್ಯಾ ಪೂಬೋ ಬೇಗಿ ಆವ್‌ಮಿಯಾ ಚೋಪ್‌ದಾರ್

**ಸಾರಥಿ ಮಾತು :**ಅಜಿಹೋ ಕಾರ್ವಾನ್ ಸಿಪಾಯಿ ಸಾಹೇಬ್ ಅಚ್ಚಾ ಹೇ ಕ್ಲೇಕರ್ ಮಹಾರಾಜ । ರಾಜಾಕು ಪೂಚ್ಕೋ ಬೇಗಿ ಜಾತೀ ಹೂಂ ।

**ಸಾರಥಿ ಮಾತು :** (ಮತ್ತೆ ಕನ್ನಡದಲ್ಲಿ ಮಾತನಾಡುವುದು ಕಂಡುಬರುತ್ತದೆ)

ಸ್ವಾಮಿ ವಿಕ್ರ ಮಾರ್ಕ ಮಹಾರಾಜರೆ ಯಾರೋ ಒಬ್ಬ ಕಾರ್ವ್ವಾನ್ ಸಿಪಾಯಿ ಒಂದು ಕುದುರೆಯನ್ನು ತೆಗೆದುಕೊಂಡು ಬಂದು ತಮ್ಮನ್ನು ಅರಸುತ್ತಾ ಇರುವನೈ ರಾಜಾ। ಮಾರ್ತಾಂಡ ತೇಜಾ।

**ವಿಕ್ರಮಾರ್ಕನ ಮಾತು :** ಧಾವಲ್ಲಿರುವನು। ಶೀಘ್ರವಾಗಿ ಕರೆದುಕೊಂಡು ಬಾ।

**ಕಾರ್ವ್ವಾನ್ ಮಾತು :** ಸಾಪ್ ಸಲಾಂ ದೇಕೋ ಮಹಾರಾಜ್।

**ಕಾರ್ವ್ವಾನ್ ಪದ :** ಲೇ ಕಿಂಕ್ಯಾ ಸ್ವಾಮಿ ಘೋಡಾ। ಲೇ ಕಿಂಕ್ಯಾ ಸ್ವಾಮಿ ಅಚ್ಛಾ ಘೋಡಾ। ಅಯಿತುಂ ದೇಟೋ ನಿಚ್ಚಂಕುಂಡುತುರೆ ಅಯ್ಯ ನಿವಾರೈಕ್ಯ ಪಂಚಾವರ್ನ೦ ಗುರಂ ಇದಿಕೋ ಇಚ್ಚೆ ಇದ್ರೆ ಬೆಲೆ ಮಾಡಿ ತಕ್ಕೋ॥ ಲೇ ಕಿಂಕ್ಯಾ॥

**ಕಾರ್ವ್ವಾನ್ ಮಾತು :** ಹೇ ಮಹಾರಾಜ್ ಏಕ್ ಘೋಡಾ ಹೈ ಅಚ್ಛಿ ತರಾಸಿ ಚಲ್ತಾ ಹೈ।

ದೂರ್ಸೆ ಆಯಾ ಹೂಂ ಮೌಲು ಲೇಕಾ ಕ್ಯಾಸಾಮಿ

**ವಿಕ್ರಮನ ಮಾತು :** ಅಜಿಹೋ ಕಾರ್ವ್ವಾನ್ ಸಿಪಾಯಿ ಸಾಹೇಬ್। ತುಮಾರಾ ಘೋಡಾ ಹೈನಾ ಅಚ್ಛಿ ತುರಾಸಿ ಚಲ್ತಾ ಹೈಕಿ ನೈಕಿ ಹಂ ದೇಕ್ನಾಹೈ।

**ಕಾರ್ವ್ವಾನ್ ಮಾತು :** ಅಜಿಹೋ ಮಹರಾಜ್ ತುಂ ಬೈಟ್ಕೋ ದೇಕ್ನಾ ಹೈ

**ವಿಕ್ರಮನ ಮಾತು :** ಅಚ್ಚಾ ಬೈಟ್ಕರ್ ದೇತಾಹೂಂ ಘೋಡಾ ಇದರ್ ದೇವ್। ಅಜಿಹೋ ಸಾಹೇಬ್ ತುಮಾರಾ ಘೋಡಾ ಹೈನಾ। ಬಹುತ್ ಅಚ್ಚಾ ತರಾಸಿ ಚಲ್ತಾಹೈ ಮೌಲ್ಕು ಕ್ಯಾ ಬೋಲ್ತಾ ಬೋಲೋ।

**ಕಾರ್ವ್ವಾನ್ ಮಾತು :** ಮೌಲ್‌ಕು ಬಾತ್‌ರಂದೇ ಮಹಾರಾಜ್। ಬಾದೂರ್ಸೆ ಬೋಲ್ತಾ ಹೈ ಆಬೀದ್ ಮತ್ತೀ ದೇಕ್ನಾಹೈ।

**ವಿಕ್ರಮನ ಮಾತು :** ಅಚ್ಚಾ ಹೈ ಕರ್ತಾ ಹೂಂ ಸಾಹೇಬ್

**ಕಾರ್ವ್ವಾನ್ ಮಾತು :** ಚಲೊ ಚಲೊ ಮಹರಾಜ್

(ಮತ್ತೆ ಕಾರ್ವ್ವಾನ್ ಮತ್ತು ಮಂತ್ರಿಯ ನಡುವಿನ ಸಂಭಾಷಣೆ)

ಕ್ಯಾರೇ ಬೈ ಅಭಿತಕ್ ದೇಕೆ ತುಮಾರಾ ರಾಜ ಯಾನ್ಯೆ। ಹಮಾರಾ ಘೋಡೆ ಯಾನಹೀ। ತುಮಾರ ರಾಜ ಕಾಂಕು ಲೇಕರ್ ಗಯಾಕಿ ಮಾಲುಂ ನೈ ಹಮೇಕು ವಕತ್ ಗಯಾ ಜಾನ ಗೈತೋ ಬೇಗಿ ಜಾಕರ್ ತುಮಾರಾ ಮಂತ್ರಿಕು ಬುಲಾದೇವ್

ISSN : 3048-7137

। **ಸಾರಥಿ ಮಾತು :**ಸ್ವಾಮಿ ಮಂತ್ರಿವರ್ಯರೇ ಕಾರವಾನನು ತಮ್ಮನ್ನು ಅರಸುತ್ತಲಿಹನು।

**ಕಾರವಾನನ ಮಾತು :**ಸಾಪ್ ಸಲಾಂ ಲೇಕೋ ಮಹಾರಾಜ್ । ಹಮಾರಾ ಘೋಡಾ ಲೇಕರ್ ಗಯಾ ಅಭಿತಕ್ ದೇಬಿ ತೂಬಿ ರಾಜಾ ಆಯಾ ನೈ । ಹಮ್ನ ವಕತ್ ಗಯಾ । ಘೋಡೇ ಕಾ ಮೌಲ್ ಬೇಗಿ ತು ದೇದಾಲ್ ।

**ಮಂತ್ರಿ ಮಾತು :** ರಾಜ ಲೇಕರ್ ಗಯಾಸೋ । ಘೋಡೇ ಕಾ ಪೈಸೆ ಹಮೇ ದೇನೇಕಾ ವಾಸ್ತೆ ಕ್ಯಾ ಸಬೂಬ್ ನಹಿ ।

ಕಾರ್‍ವಾನ್ ಮಾತು : ಸಬೂಬ್ ನಹೀ ಸೋ ಹಂ ಪೂಚ್ಕೋ ರಾಜ ಕರ್‌ಸೋ ಕಾಂ । ಮಂತ್ರಿ ಕಾಂ। ಮಂತ್ರಿ ಕರೇಸೋ ಕಾಂ ರಾಜಾಕಾ ಮೌಲ್ ವುಸ್ವಾಸ್ತೆ ಹಮಾರೆ ಪೈಸೆ ತುಮೇ ದೇನಾ ಹೈ । ತುಮೆ ಜಲ್ದಿ ದೇದಾಲ್ । ತುಮ್ಹಾ ಚೋಡ್ತಾ ನೈ ಏಕ್ ಮಿನಿಟ್ಮೆ ಮೆ ಪೈಸೆ ವಸೂಲ್ ಕರ್ತಾ ಹೂಂ । ಕ್ಯಾ ತಮಾಷಾ ಕು ದೇಖೋ।

**ಮಂತ್ರಿ ಮಾತು :** ಜರ್‍ರಾ ಚುಪ್ಕೋಜಿ ತುಮಾರೆ ಪೈಸೆ ಹೈ ಸಬ್ ಕರಾಹೂ ।

**ಕಾರವಾನ್ ಮಾತು :** ಅಜಿಹೋ ಮಹರಾಜ್ ಯತ್ರೆ ತಕ್ಲೆದೇಕೆ ತುಬಿ ರಾಜಯಾ ನಹೀ ಹಮಾರೆ ಪೈಸೆ ದಿಯೆ ನಹಿ ಹಮೆ ಕೆತ್ತಾ ಹಕತ್ ಬೈಟ್ನಾಜಿ ಹಮ್ ನಾ ವಕತ್ ಗಯಾ

**ಮಂತ್ರಿ ಮಾತು :**ಅಜಿಹೋ ಕಾರ್‍ವಾನ್ ಸಾಹೇಬ್ ತುಮಾರೆ ಪೈಸೆ ಕಾಮ್ ಜಾತಾ ಹೈ। ಕಾಯ್ಕ ಗಲಾಟೆ ಕರ್ತಾಹುಂ ಜರಟಿರೋರಾ ರಾಜಾ ಅಂದೆ।

**ಕಾರವಾನ್ ಮಾತು :**ಪೈಸೆ ಕಾಮ್ ಜಾತಾ ಹೈ । ಬೋಲ್‌ನೆ ಷರೀಖ್ ಸುನ್ನಾಲೋ ಬೈಟ್‌ಕ್ಕರೇ । ಹಮಾರಾ ಪೈಸೆ ವಸೂಲ್ ಕರ್ತಾ ಹೂಂ । ಕ್ಯಾ ತಮಾಷಾ ದೇಖೋ ಬಾಚಂದ್

**ಕಾರವಾನ್ ಮಾತು :** ಅಜಿಹೋ ಮಹರಾಜ್ ಕೆತ್ತಾ ವಕಲ್ ಬೈಟ್ನಾಜಿ। ಹಮ್ ಕ್ಯಾಜಿ ತುಮಾರಾ ಘೋಡ್ । ಯತ್ತಾ ಪೋದನೋ ಭೂಮಿ ಪಾಲ। ಕೋನ್ ಸತ್ತೋರ್‌ಗೆ ಹೈತಲ್ಲ ಹತ್ತಂಗೆ ಹಳ್ತೀಯ ಬಾಚಂದ್ । ಗಯಾ ತೋ ವುನೇಚ್ ಗಯಾ । ಮರೇ ತೋ ಹಮಾರಾ ಜಾಂಟ್ ಗಯಾ । ಗೊತ್ತಿಲ್ಲ ನಿನಗೆ ಸಾಬ್ರುದು ಹೈತಲ್ಲ ಕುತ್ಗೆ ಮೇಲೆ ಕುಳ್ತಿರೋದು । ಯಿತ್ಲಾಗಿ ರುಪಾಯಿ ಪೈಸಲ್ ಮಾಡಿಬಿಡು । ನೈ ರಯಾತ್ ಹಮಾರ ಘೋಡ್ ದೇವ್ । ಬೋಲ್ ತಾ ಬೋಲ್ ಬಾಂಚದ್

**ಮಂತ್ರಿ ಮಾತು :**ಅಜಿಹೋ ಕಾರವಾನ್ ಸಾಹೇಬ್ । ಘೋಡಾ ದೇನಾಕೆ ವಾಸ್ತೆ

ಲೇಖರ್ ಗಯಾಸೋ ರಾಜಾ ಪತ್ತಾಹೋ ನಹೀ। ಉಸ್ವಾಸ್ತೆ ಯೇಕ್ ಗಡೀ ಪುರಸತ್ ದಿಯಾತೋ ತುಮಾರೆ ಪೈಸೆ ದೇದಾಲ್ ತುಮಾರೆ ಪೈಸೆ ದೇದಾಲ್ ತುಮ್ ಕಹಾ ಕೂಡ್ಲಾಟ ಕ್ಯೂಹೂಂ ಚುಪ್ಕೆ ಬೈಟೆ.

**ಕಾರವಾನನ ಮಾತು :** ಅರೆ ನಮ್ಗೆ ಬಹಳ ಕೆಲ್ಸ ಇದ್ದಾವೆ। ಒಳ್ಳೆ ಗಿರಾಕಿ ಬಂತಲ್ಲಾ

**ಕಾರವಾನನ ಮಾತು :** ಹಕೀ ಹೋ ಮಂತ್ರಿ ಹಮಾರಾ ಘೋಡಾ ಕಾ ಮೌಲ್ ಬೇಗಿ ದೇವ್ ಹಮ್ ಜಾನಾಗೈತೋ।

**ಮಂತ್ರಿ ಮಾತು :**ಎಲ್ಲೈ ಕಾರವಾನನೇ ನಿನ್ನ ಕುದುರೆಯ ಕ್ರಯವೆಷ್ಟು? ಹೇಳುವನಾಗು

**ಕಾರವಾನನ ಮಾತು :**ಸಬ್ಬೀ ಬೋಲ್ತಾಹು ದೇಖೋ ಮಹಾರಾಜ್ । ಹಮಾರೆ ಘೋಡೆ ಕಾ ಮೌಲ್ ಏಕ್ ಲಾಕ್ ರುಪಾಯಿ ಹೋತಾ ಹೈ । ಏಕ್ ಪೇಸೆ ಕಮ್ಮಿ ದಿಯಾತೋ ಹಮೇರೇ ರೈಕಿ ನಹೀ ಬರಾ ಬರ್ ದೇನಾ ಹೈ ।

**ಮಂತ್ರಿ ಮಾತು–ಚರನಿಗೆ :** ಎಲ್ಲೈ ಚರನೇ ಈ ಕ್ರೂರನಾದ ಕಾರವಾನನಿಗೆ ಅರಮನೆ ಭಂಡಾರದಲ್ಲಿ ಒಂದು ಲಕ್ಷ ರೂಪಾಯಿ ಕೊಡಿಸುವನಾಗು । ಈಗಲೇ ಹೋಗು।

**ಚರನ ಮಾತು :** ಅಪ್ಪಣೆಯಂತೆ ಕೊಡಿಸುತ್ತೇನೆ. ನಮ್ಮಪ್ಪನ ಗಂಟೇನಾದ್ರೂ ಹೋದೀತೆ।

**ಕಾರವಾನ್ ಮಾತು :**ಅಜಿಹೋ ಮಹಾರಾಜ್ ಸಾಪ್ ಸಲಾಂ । ಹಮರಾ ಘೋಡೆ ಮಾಲ್ ಹಂಕು ಆಯೇ । ಮೆರ್ಬಾನಿಂದೆ ಮಹರಾಜ್ ..

ಹಾಗೆಯೇ ಇದೇ ಕಥಾ ಪ್ರಸಂಗದಲ್ಲಿ ಬರುವ ಶೆಟ್ಟಿ(ವೈಶ್ಯ), ಶೆಟ್ಟಿಯ ಮಗ, ಮಗಳು ಹಾಗೂ ವಿಕ್ರಮಾರ್ಕ ರಾಜನ ನಡುವೆ ನಡೆಯುವ ಸಂಭಾಷಣೆಗಳು ಕನ್ನಡ ಹಾಗೂ ತೆಲುಗು ಭಾಷೆಗಳ ಸಂಯೋಜನೆಯಿಂದ ಕೂಡಿರುವುದು ವಿಶೇಷ ತೆರನಾಗಿ ಕಂಡುಬರುತ್ತದೆ. ಇಲ್ಲಿನ ಸನ್ನಿವೇಶಗಳು ಸಾಮಾಜಿಕ, ಸಾಂಸ್ಕೃತಿಕ ಮತ್ತು ವ್ಯಾವಹಾರಿಕ ಅನನ್ಯತೆಯನ್ನು ಸಾಕ್ಷೀಕರಿಸುತ್ತವೆ.

**ಧನಪಾಲ ಶೆಟ್ಟಿ ಬರುವಿಕೆ–ಪದ :** ಸಂತಲೋ ಧಾರಣ ಲೆಂತೆಂತೆಕ್ಕಿನ ಅಂತಾ ವಿವರಮುಗಾ ದೆಲುಪು। ಮೆಂತ್ಯಾಲು ಮಿರಿಯಾಲು ಚಿಂತಪಂಡು ಧರಲೆಟ್ಲೆಟ್ಲ । ತೆಲ್ಲಟಿ ಬೆಲ್ಲಮು ಧಾರಣಲೆಟ್ಲ ಚಿಲ್ಲರ ದಿನಸಲು ಧರಲೇಮಿ । ಪಲ್ಲುಲನ್ನೆ ಚಿಲ್ಲರುಗಾ ಗೊಲ್ಲವಾರು ಎಟ್ಲಿಚ್ಚಿರಿರಾ॥ ಅಚ್ಚು ಬೆಲ್ಲಮು ಪಚ್ಚಿ ಅಲ್ಲಮು ಧರಲೆಟ್ಲೆಟ್ಲ॥

ISSN : 3048-7137

ಹಿಗ್ಗಿನದಾ ತಗ್ಗಿನದಾ ಕಚ್ಚಾ ಲೆಕ್ಕಲು ವ್ರಾಸಿನದಾ ಸಂತಕು ಪೋಯೆ ಚಿಂತಲೋಪುಲ ಸಂಚುಲನ್ನಿಯು ಮರಿಸೋಸ್ತಿ । ಪೊಪ್ಪು ಶನಿಗಲು । ಉಪ್ಪು ಶನಿಗಲು ತೆಚ್ಚೇದಿ ಲೆಕ್ಕ ವ್ರಾಸಿನದಿ ॥ಪ॥

**ಧನಪಾಲ ಶೆಟ್ಟಿ ಮಾತು :** ವೊರೆ ಆದಿಮೂರ್ತಿ ಅಂಟಿ ಯಾಟಿಕಿ ಪೋಯಿನೋ ಮೊದ್ದು ಮುಂಡಾಕೊಡುಕು. ಯಿಕ್ಕಡ ಅಂಗಡ್ಲೋ ವ್ಯಾಪಾರಂ ಜಾಸ್ತಿಗಾವುಂದಿವಿವಲ್ಲ ತೀಸುಕೋವಲ್ಲ । ಲೆಕ್ಕಲು ವ್ರಾಯಲ್ಲ । ತೀ ಅದೀನೂ ರಾಲೇದು. ವೊರೆ ಆದಿಮೂರ್ತಿ ಅಂಟಿ

**ಆದಿಮೂರ್ತಿ ಮಾತು :** ಯಾಲಯ್ಯಾ ಅಂಟಿ ವಸ್ತುನ್ನಾನಯ್ಯಾ । ಕಾಕಿ ಕೊಟ್ಟುಕುನ್ನಟ್ಲು ಕೊಟ್ಟುಕ್ಕುಂಟಾವು

**ಶೆಟ್ಟಿ ಮಾತು :** ರಾರಾ ಇಕ್ಕಡ ಅಂಟಿ

**ಆದಿ ಮಾತು :** ವಸ್ತುನ್ನಾನಯ್ಯ ಅಂಟಿ

**ಶೆಟ್ಟಿ ಮಾತು :** ಕಾದುರಾ ಮೊನ್ನ ಬಜಾರುಕು ಪೋಯಿವುಂಟಿವೇ ಹಿಂದೂಪುರಂನಕು ದಿನಸುಲು ಎಟ್ಲೆಟ್ಲವುಂಡೆ ಚೆಪ್ಪುರಾ

**ಆದಿ ಮಾತು :** ಏಮಿ ಲೇದಯ್ಯಾ ಬೆಲ್ಲಂ ಪುಂಟ್ಲು ಪುಂಟ್ಲುಗಾನೇ ಉಂಡೆ. ತಿಂಟೆ ತೀಗುಂಡೆ. ಅಯ್ಯಾ ಮಿರುಪ ಕಾಯಿಲು ಇಂತಿಂತ ಅಂತಂತ ವುಂಡೆನಯ್ಯ ನೋಟಿಲೋ ಪೆಟ್ಟುಕೋನಿ ಕೊರಿಕೆತೆ ಬಲು ಕಾರಮುಗಾ ವುಂಡೆನಯ್ಯಾ ಚಿಂತಪಂಡು ತಿಂಟೆ ಪಂಡ್ಲನ್ನಿ ಸುಳ್‌ಮನೇನಯ್ಯಾ

**ಧನಪಾಲಶೆಟ್ಟಿ ಮಾತು :** ಕಾದುರಾ ರಖಾಲು ತೀಪೆ ಸಪ್ಪೆ ಅಡುಗಲೇದುರಾ ದಿನಸುಲ ರೇಟ್ಲು ಎಟ್ಲುಂಡೆ ಅಂಟಿ

**ಆದಿಮೂರ್ತಿ ಮಾತು :** ಏಮಿಲೇದಯ್ಯ ದಿನಸುಲ ರೇಟ್ಲನ್ನಿ ಜಾಸ್ತಿಗಾವುಂಡೆ ದಾನ್ನಿಂಕ ಉಪ್ಪು ಮಾತ್ರಮು ರೇಟು ಡೌನಯ್ಯಿವುಂಡೆ ಒಕಲೋಡು ಉಪ್ಪು ತೀಸ್ತಿನಯ್ಯಾ ಬಾಡಿಗಿಕಿ ಬಂಡ್ಲು ದೊರಕಲೇದು. ಲಾರಿನೂ ಸಿಕ್ಕಲೇದು. ಅಟ್ಲೇ ಯೋಚನ ಚೇಸ್ತಿನಯ್ಯಾ. ಇವಿ ಅನ್ನಟಿಕಿ ಬಾಡಿಗ ದುಡ್ಲು ದಂಡುಗಾ ಅನಿ ಚೂಡಯ್ಯ ಪೆದ್ದೇರು ವಸ್ತುಂದೇ ಮನ ಇಂಟಿ ಮುಂದುರ ದಾಂಟಿಲೋ ವೇಸ್ತಿನಯ್ಯಾ ಯಿಂಕಾರಾಲೇದಮಯ್ಯ.

**ಶೆಟ್ಟಿ ಮಾತು :** ಇದಿ ಏಮಿರಾ ಇಟ್ಲಾ ಪನಿ ಚೇಸ್ತಿವಿ ಉಪ್ಪು ನೀಳ್ಳಲೋ ಕರಗುತುಂದಿ ಅನೇದಿ ತೆಲೀದೇಮಿರಾ (ಹೊಡೆಯಲು ಮುಂದಾಗುವನು)

ಅಯ್ಯೋ ಪಾಪಿ ಮುಂಡಾವಾಡ ಅನ್ಯಾಯಂ ಚೇಸ್ತಿವಿ ಕದರಾ (ಆದಿಮೂರ್ತಿ ದೂರ ಹೋಗುವನು) ಆದಿಮೂರ್ತಿ ರಾಪ್ಪ ಇಕ್ಕಡ ರಾಪ್ಪ.

**ಆದಿಮೂರ್ತಿ ಮಾತು :** ಯಾಲ ನೀವು ಕೊಟ್ಟೇಕೆಮಯ್ಯಾ ಪಿಲಿಚೇದಿ.

**ಧನಪಾಲ ಶೆಟ್ಟಿ ಮಾತು :** ಲೇದು ರಾಪ್ಪ ವಾನಿಕಿ ಏಮಿ ಚೆಪ್ಪಿತಿವಿ. ಸಿದ್ದಿಪಲ್ಲಿ ನಂದೇಗೌನಿಕಿ.

**'ಆದಿಮೂರ್ತಿ ಮಾತು :** ಚೆಪ್ಪೇಸ್ತಿನಯ್ಯಾ ಮಾಯಯ್ಯಾ ಚಚ್ಚಿಂಡಾಡು ಮಾಕೊದ್ದು ಅಂಟಾ.

**ಧನಪಾಲ ಶೆಟ್ಟಿ ಮಾತು :** ಏಮಿರಾ ಮೊದ್ದು ಮುಂಡಾಕೊಡುಕಾ ಗುಂಡ್ರಾಯಿವುನ್ನಟ್ಲ ವುನ್ನಾನು। ಪಿಲ್ಲಮುಂಡಾವಾಡ ಆಯಿತೇ ಕಾನಿ । ಪೋಯಿ ನಂದೇಗೌನ್ನಿ ತೋಡ್ಕೊನಿ ಪೆದ್ದಕ್ಕಯ್ಯನಿ ಪಿಲಿಚಿ ತ್ಯಾಪುರಾಲು ಕೊಮ್ಮು ಕೊನಿ ತೆಲುಪುಲಕು ಶಿವಂ ವೇಸಿ ಪೊಂಪಿಚ್ಚು. ರೆಂಡೋದಿ ನೇನು ಚೂಸುಕೊಂಟಾನು.

**ಆದಿ ಮೂರ್ತಿ ಮಾತು :** ಓಹೋ ಸರೆ ಸರೆ ಇಪ್ಪುಡು ತೆಲಿಸಿನಯ್ಯ ಮಾ ಅಮ್ಮ ಕದೇಮಯ್ಯ ಆ ಯಮ್ಮ ಎಕ್ಕಡ ವಸ್ತುಂದಯ್ಯಾ ವಂಟ ಚೇಸೇದಿ ವಿಡಿಜಿ ನಾಕು ತಲದೂಬಿ ಜಡವೇಸಿ ಪೂಲು ಮುಡುಚಿ ತಿನೇಕಿ ಸೇರುನಿಂಡಾ ಬುರುಗುಲು ಇಚ್ಚಿ ನನ್ನೇ ಪಂಪಿಚ್ಚೇನಯ್ಯಾ.

**ಶೆಟ್ಟಿ ಮಾತು :** ವೊರೆ ಆದಿಮೂರ್ತಿ ರಾರಾ ಯಿಕ್ಕಡಾ. ಅಕ್ಕಡ ಚೂಡುರಾ ಕೂಚೋ ವುಂಡೆ ಮಹಾನುಭಾವುನ್ನಿ. ಅತಡು ಈ ಚೋಟುಕು ವಚ್ಚಿನ ತರವಾತ ಮನ ಇಂಟಿಲೋಪಲು ಪದಕೊಂಡು ಸಂವತ್ಸರಮುಲನುಂಡಿ ಪಾಡುಬಡಿನ ಸರಕಂತಾ ವ್ಯಾಪಾರಮಯ್ಯಿ ಮನಯಿಂಟಿಲೋ ಲಕ್ಷ್ಮೀ ತಾಂಡಮಾಡುತುಂದಿರಾ ಈ ಮಹಾನುಭಾವುಡು ಕುಚ್ಚೊನ್ನಪಟ್ಟಿನಿಂಕ.

**ಆದಿಮೂರ್ತಿ ಮಾತು :** ಅಟ್ಲೈತೆ ಅಟ್ಲೇಮಯ್ಯಾ।

**ಶೆಟ್ಟಿಮಾತು :** ವೂಂನ್ ರಾ ನೀವು ಊರಿಕೆ ವುಂಡ್ರಾ ನೇನು ವಿಚಾರಮಂತಾ ತೆಲುಸುಕುಂಟಾನು ಸರಿಪಡಿತೆ ಮನ ಅಮ್ಮಯ್ಯನಿ ಇಚ್ಚಿ ಪೆಂಡ್ಲಿಚೇಸಿ ಇಕ್ಕಡನೇ ವುಂಚುಕುಂದಾಮು.

**ಆದಿಮೂರ್ತಿ ಮಾತು :** ಅಯ್ಯಾ ವಾನಿಕಿ ಇಸ್ತೇ ನಾಕಯ್ಯಾ ನಾಕೇ ಕಾವಲಯ್ಯ ಅಮ್ಮಯ್ಯ.

ISSN : 3048-7137

**ಶೆಟ್ಟಿ ಮಾತು :** ಮನ ಅಮ್ಮಯ್ಯ ನೀಕು ಕಾದುರಾ. ಅಮ್ಮಯ್ಯದಿ ಅಯಿನ ತರವಾತ ನೀಕು ಬೆಂಗಳೂರಿಲೋ ಪೆದ್ದ ಷಾವಕಾರುಲು ಇಂಟಿಲೋ ಚೇಸ್ತಾನು ವೂರಿಕೇ ವುಂಡುರಾ.

**ಆದಿಮೂರ್ತಿ ಮಾತು :** ಹೂಂ ಎಟ್ಲೋ ಅಮ್ಮಯ್ಯ ದಾಂಟಿಲೋ ನಾದಿ ಚೇಸ್ತೇನೆ.

**ಶೆಟ್ಟಿ ಮಾತು :** ಕಾನಿ ಲೇರಾ ಚೇಸ್ತಾನು ನಾದಿ ದಂಡಮು ದ್ಯಾವುಡ (ವಿಕ್ರಮಾರ್ಕನ ಬಳಿ ಬಂದು ಮಾತನಾಡಿಸುತ್ತಾ) ನಮೋ ನಮೋ ರಾಜಪುತ್ರನೇ.

**ಆದಿಮೂರ್ತಿ ಮಾತು :** ಅದೇಮೋನಯ್ಯ ನೀವು ಚೆಪ್ಪೇದಂತಾ ಗುಟ್ಟೇನಯ್ಯಾ ವೀಳ್ಳಂತಾ ಮಾಲೋಳ್ಳೆ. ಕಾದು ಕಾದು ಮಾವೋಳ್ಳೆ ಗುಟ್ಟೇಮೀಟಿ ಚೆಪ್ಪಯ್ಯಾ.

**ಧನಪಾಲ ಶೆಟ್ಟಿ ಮಾತು :** ಏಮಿರಾ ಆದಿಮೂರ್ತಿ ನೀಕು ತೆಲಿಯದೇಮಿರಾ ವೇಲು ವೇಲು ಖರ್ಚು ಚೇಸಿ ಚದಿವಿಚ್ಚಿಂದಾನಿಕಿ ಸಾರ್ಥಕಮಾಯ. ಇಕ್ಕಡರಾರಾ ದೆಗ್ಗಿರಿಕಿ ಪೆದ್ದಕ್ಕಯ್ಯನು ಪಿಲಿಚಿ ಅಂಟಿ ಪೆದ್ದಸೇರು ಎತ್ತುಕೋನಿ ರಾ. ಅಚಿಟ ತೆಲುಪುಲಕಿ ಶಿವಮು ಏಸಿ ಅಂಟೆ ರೂಪಾಯಿ ಲಿಂಟಿಕಿ ಸುನ್ನ(ಸೊನ್ನೆ) ಪೆಟ್ಟು ಅಚಿಟ ತೆಲಿಸೇನೇಮಿರಾ.

**ಆದಿಮೂರ್ತಿ ಮಾತು :** ವೂನಯ್ಯ ತೆಲಿಸಿನಯ್ಯ ಮನಿ ವರ್ತಕುಲು ವ್ಯಾಪಾರಮುಲೋ ರೈತುಲಕು ಮೋಸಮು ಚೇಸಿ ವೇಲುವೇಲಿಕಿ ಸರಕುಲು ತೀಸಿ ದುಡ್ಲು ಈಕಾ ಇರಸಾಲ್‌ಮೆಂಟ್ಲು ತೀಸುಕೊನಿ ಪಟ್ಣಮು ಸೇರೇದಿ ಕದೇಮಯ್ಯಾ!

**ಧನಪಾಲ ಶೆಟ್ಟಿ ಮಾತು :** ಯಿಂತೈನ ಆದಿ ರಾನೇಲೇದು ಕದುರಾ ಆದಿಮೂರ್ತಿ

**ಆದಿಮೂರ್ತಿ ಮಾತು :** ಆದಿ ಅಂಟೆ ಎವರೈಯ್ಯಾ ಚತ್ತ ವೂಡಿಸೆ ರಂಗೇಮಯ್ಯಾ.

**ಶೆಟ್ಟಿ ಮಾತು :** ಕಾದುರಾ ಅದಿರಾ ಅಂಟೇ

**ಆದಿಮೂರ್ತಿ ಮಾತು :** ಏಮಿ ಇಮಾಮ್‌ಗಾನಿ ಪೆಂಡ್ಲಾಮೇಮಯ್ಯ

**ಶೆಟ್ಟಿ ಮಾತು :** ಎನ್ನಿ ದಪಾಲು ರಾ ನೀಕು ಚೆಪ್ಪೇದಿ ಆದಿ ಅಂಟೆ ನೀಕು ತೆಲಿಯದೇಮಿರಾ

**ಆದಿಮೂರ್ತಿ ಮಾತು :** ಇಂಕೆವರಯ್ಯಾ ಅಲ್ಲಕ್ಕವ್ವಮೇಮಯ್ಯ

**ಶೆಟ್ಟಿಮಾತು :** ಮೊದ್ದು ಮುಂಡಾವಾಡು ಅದಿರಾ ಅದಿರಾ ಅಂಟೆ ಎನ್ನಿ

ದಪಾಲು ಚೆಪ್ಪಿನ ನೀಕು ಅರ್ಥಂ ಕಾಲೇದು ನೀಕು ಚೆದುವು ನೇರ್ಪಿಂಚಿದಾನಿಕಿ ಸಾರ್ಥಕಮಾಯ.

ಮಹಾಭಾರತ ಕಥೆಯಲ್ಲಿ ಬರುವ ಮುಖ್ಯ ಪ್ರಸಂಗವೆಂದರೆ 'ಧರ್ಮರಾಯನ ಅಶ್ವಮೇಧಯಾಗ' ಪಾಂಡವರು ಕುರುಕ್ಷೇತ್ರದಲ್ಲಿ ನಡೆದ ಕಾಳಗದಲ್ಲಿ ಕೌರವರನ್ನು ಹತಗೊಳಿಸಿದ ಹಲವು ವರ್ಷಗಳ ನಂತರ ತಮ್ಮ ಕೀರ್ತಿ, ಪರಾಕ್ರಮಗಳು ಭೂಮಂಡಲದಲ್ಲಿ ವಿಜೃಂಭಿಲೋಸುಗ ಅಶ್ವಮೇಧಯಾಗವನ್ನು ಮಾಡಲು ನಿಶ್ಚಯಿಸುತ್ತಾರೆ. ಯಾಗದ ನಿಮಿತ್ತ ನೇಮಕವಾದ ಕುದುರೆಯ ಹಿಂದೆ ಅರ್ಜುನನು ಹೋಗುತ್ತಾನೆ. ಕುದುರೆಯು 'ಮಲೆಯಾಳ' ಎಂಬ ಪ್ರಾಂತ್ಯವನ್ನು ಪ್ರವೇಶಿಸುತ್ತದೆ. ಅಲ್ಲಿಯ ರಾಣಿ ಪ್ರಮೀಳ. ಆ ರಾಜ್ಯದಲ್ಲಿರುವವರೆಲ್ಲರೂ ಸ್ತ್ರೀಯರೇ ಆಗಿರುವುದು ವಿಶೇಷ. ಪ್ರಮೀಳೆಯ ದಂಡನಾಯಕಿರಾದ ಕಮಲೆ, ಕಾಂತಾಮತಿ, ಅನುರಾಗಿಣಿಯರು ಪಾಂಡವರ ಯಾಗದ ಕುದುರೆಯನ್ನು ಬಂಧಿಸುತ್ತಾರೆ. ಈ ವಿಷಯ ತಿಳಿದಂತ ಅರ್ಜುನನ ಸೇನೆಯಲ್ಲಿದ್ದ 'ಪಠಾಣ್' ಎಂಬುವನು ದಂಡನಾಯಕಿಯರನ್ನು ಕುರಿತು ನಡೆಸುವ ಸಂಭಾಷಣೆಯು ಕನ್ನಡ, ತೆಲುಗು ಮತ್ತು ಉರ್ದು ಮಿಶ್ರಿತ ಭಾಷಾ ಸಾಹಿತ್ಯವು 'ಪ್ರಮೀಳಾ ದರ್ಬಾರ್' ಅಥವಾ 'ಧರ್ಮರಾಯನ ಅಶ್ವಮೇಧಯಾಗ' ಎಂಬ ಮೂಡಲ ಪಾಯ ಯಕ್ಷಗಾನ ಪ್ರಸಂಗ ಪಠ್ಯದಲ್ಲಿ ಕಂಡುಬರುವುದು ವಿಶೇಷವಾಗಿದೆ.

**ಪಠಾಣ್‌ಮಾತು:** ಅರೆರೆ ಕೈಸೆ ಆದ್ಮಿರೆ। ಅರೆ ಚೋಕ್ರಿ। ಏಕೆ ಈ ಅಶ್ವಂ ಪಟ್ಟಿಂಡಾರು। ಅರೆ ಭಾಂಚೇದ್। ಏ ಘೋಡಾ ಪಕಡ್ಲಿಯಾಕೆ। ಬಹುತ್ ಲಡಾಯಿ ಆಯಿಂಗೆ। ಅರೆರೆ ಎಂತಾ ಗಟ್ಟಿ ಆಡೋಂಡ್ಲು ಈರು। ಎಂತಾ ತೆಗಿಂಡಾರು। ನೇನು ಮರಿ ನಾಘೋಡಾ ವುಂಡಾನು ಗಿಂಡಾನು ಅನೆ ಭಯಂ ಗಿಯಂ ಕ್ಯಾಬಿನ್ನೈ। ಅರೆ ಚಿನಾಲ್ ಮಾ ಘೋಡಾ ಬಿಡ್ತೀಯಾ ಇಲ್ಲವಾ।

**ಕಾಂತಾಮತಿ ಮಾತು:** ಎಲವೋ ಈ ಅಶ್ವವನ್ನು ನಾಂ ಬಿಡುವುದಿಲ್ಲ ನಿಮ್ಮ ದೊರೆಗೆ ತಡೆದಿರುವರೆಂದು ತಿಳಿಸುವನಾಗು (ಟೋಪಿ ತೆಗೆದು ಹಾಕುವರು)

**ಪಠಾಣ್‌ಮಾತು:** ಅರೆ ಅಲ್ಲಾ । ಕುದುರೆ ನಕ್ಕೋ ಕ್ಯಾಬಿನಕ್ಕೋ । ಚೋಡ್ ದಿಯಾತೋ । ಮೈಜಾತುಂ ಅರೆ ಅಲ್ಲಾ । ಟೋಪಿ ಗಯಾ । ಢಾಲು ಗಯಾ। ಕತ್ತಿ ಗಯಾ । ಮಹಾರಾಜ್ ಬುಲಾಲಾಕೋ। ಇವರಿಗೆ ಮಾಡುಸ್ತೀನಿ ಶೋಭನಾ (ರಂಗದಿಂದ ನಿರ್ಗಮಿಸುವನು)

**ಅರ್ಜುನನ ಮಾತು :** (ಕುದುರೆ ಬಗ್ಗೆ ವಿಚಾರಿಸುತ್ತಾ) ಓಹೋ ಅಲ್ಲಿ ಪಠಾಣ್

ISSN : 3048-7137

ಆತುರದಿಂದ ಬಂದಂಗಾಯಿತು. ಕುದುರೆ ವಿಷಯ ಪರಿಕಿಸಿ ನೋಡೋಣ ನಡೆಯಿರಿ.

**ಪಠಾಣ್ ಮಾತು (ಪ್ರವೇಶ) :** ಹೇ ಮಹಾರಾಜ್ ಏ ಗಾಂವ್ ಮೇ ಅಚ್ಛಾ ಹೆಂಗಸು ಹದ್ಯೆ । ನಮ್ ದ್ರೌಪದಮ್ಮ ಇಲ್ವೇ । ಆಯಮ್ಮಂಗಿತಲೂ ನಾಜೂಕಾಗಿ ಉಂಡಾದಿ ಶಾಮಿ । ಭೇದಂಗೀದಂ ಕ್ಯಾಬಿನ್ಯೆ । ಇಂದ್ರಪಟ್ಟಣಕ್ಕೆ ನಾನು ನಿಮ್ಮ ಜೊತೆ ಬಂದಿಲ್ಲ । ಅಲ್ಲಿ ಚಾರ್ ಮಂದಿ ಕನ್ನೆಯರು ಇದ್ದಿಲ್ಲ । ರಂಭಕ್ಕ ಊರಕ್ಕ, ಮೇನಕ್ಕ, ತಿಲಕ್ಕ ಅವರಿಗಿಂತಲೂ ಅಚ್ಛಾ ಉಂಡಾದಿ ಶಾಮಿ। ಅವರಿಗೆ ಕುದುರೆ ಬೇಕಂತೆ । ರೊಕ್ಕಂ ಇಸ್ತಾರಂಟಾ ಶಾಮಿ। ಬಹುತ್ ಲಡಾಯಿತರೇ ವಾಳ್ಳು । ಗುರ್ರಂ ಬಿಡುವುದಿಲ್ಲ ಅಂತಾರೆ ಶಾಮಿ। (ಮಾತು ಮುಗಿಸುತ್ತಾನೆ.)

ಹಾಗೆಯೇ ಕಮಲ ಎನ್ನುವ ದಂಡನಾಯಕಿಯಿಂದ ಸೋಲಲ್ಪಟ್ಟ ನೀಲಧ್ವಜನಿಗೆ ಪಠಾಣ್ ಹೀಗೆ ನುಡಿಯುತ್ತಾನೆ.

**ಪಠಾಣ್ ಮಾತು:** ಎಲೋ ಅಮ್ಮಾಕು ಕೈಮುಗಿ। ಇಲ್ಲಾಂದ್ರೆ ಬಿಸ್ಮಿಲ್ಲಾ ಮಾಡ್ತಾಳೆ.

ರಾಗಮಂಜರಿ ಎಂಬುವಳಿಂದ ಪ್ರದ್ಯುಮ್ನನೆಂಬ ರಾಜಕುಮಾರ ಸೋತು ಓಡಿ ಹೋಗುತ್ತಾನೆ. ಪಠಾಣ್ ಅಲ್ಲೇ ಇರುತ್ತಾನೆ. ಅಲ್ಲದೆ ತನ್ನನ್ನು ಕೊಲ್ಲಬೇಡ ಎಂದು ಬೇಡಿಕೊಳ್ಳುತ್ತಾನೆ.

**ಪಠಾಣ್ ಮಾತು:** ತುಮಾರೆ ಪಾಂಪಡುತುಂ। ಪಾಣಂ ತಿಯೊದ್ದಮ್ಮಾ ಯುದ್ಧಾನಿಕಿ ಇಂಕೊಕ್ಕರಿನಿ ಇಡುಸ್ತಾನು.

ಮೇಲೆ ತಿಳಿಸಿರುವ ಸನ್ನಿವೇಶವು ಅಡಕವಾಗಿರುವ ಪ್ರಮೀಳಾ ದರ್ಬಾರ್ ಪ್ರಸಂಗವನ್ನು ಮಧುಗಿರಿ ಪ್ರಾಂತ್ಯದ ಹೊಸಕೋಟೆ, ಛತ್ರಪಾಳ್ಯ ಮುದ್ದೇನೇರಳೆಕೆರೆ ಹಾಗೂ ಮಡಕಶಿರಾ (ಆಂಧ್ರ) ಪ್ರಾಂತ್ಯದ ರತ್ನಗಿರಿ, ಗಿರೇನಾಯ್ಕನಪಾಳ್ಯ, ಮೈನಗಾನಪಲ್ಲಿ, ಕೊಡಗಾರಿಗುಟ್ಟ ಮುಂತಾದ ಕಡೆಗಳಲ್ಲಿ ನಡೆಸಿಕೊಂಡು ಬರುತ್ತಿರುವುದು ಇಂದಿಗೂ ಕಂಡುಬರುತ್ತಿದೆ.

ಮುಖ್ಯವಾಗಿ ಮೇಲಿನ ಅನೇಕ ಅಂಶಗಳು ಆಟದ ಪ್ರದರ್ಶನ ವೇಳೆಯಲ್ಲಿ ಕಂಡುಬರುವ ಕ್ರಿಯಾತ್ಮಕ ಚಟುವಟಿಕೆಗಳಾಗಿವೆ. ಇವು ಕರ್ನಾಟಕ ಗಡಿಭಾಗದ ತುಮಕೂರು ಜಿಲ್ಲೆಗೆ ಸೇರಿದ ಮಡಕಶಿರಾ, ಹಿಂದೂಪುರ ಪ್ರಾಂತ್ಯಗಳ ಬಯಲಾಟ ಪ್ರದರ್ಶನಗಳಲ್ಲಿ ಕಂಡುಬರುತ್ತವೆ.

## ಆಕರ ಗ್ರಂಥಗಳು

1. ಅಕ್ಷರ ಕೆ.ವಿ. ರಂಗಪ್ರಯೋಗ, ಅಕ್ಷರ ಪ್ರಕಾಶನ, ಹೆಗ್ಗೋಡು, 2012
2. ಅಕ್ಷರ ಕೆ.ವಿ. ರಂಗಭೂಮಿ ಪೂರ್ವ–ಪಶ್ಚಿಮ, ಅಕ್ಷರ ಪ್ರಕಾಶನ ಹೆಗ್ಗೋಡು, 2019
3. ಚಂದ್ರಶೇಖರ ಕಂಬಾರ, ಉತ್ತರ ಕರ್ನಾಟಕದ ಜನಪದ ರಂಗಭೂಮಿ, ಮನ್ವಂತರ ಪ್ರಕಾಶನ, ಧಾರವಾಡ, 1965
4. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2011
5. ನಾಯಕ್ ಎನ್.ಆರ್., ಕನ್ನಡ ಬಯಲಾಟ ಪರಂಪರೆ, ಜಾನಪದ ಅಕಾಡೆಮಿ, ಬೆಂಗಳುರು, 1982
6. ಪುಟ್ಟಸ್ವಾಮಯ್ಯ ಬಿ. ಕನ್ನಡ ರಂಗಭೂಮಿ ನಡೆದುಬಂದ ದಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1983
7. ಬಸವರಾಜ ಪಿ. ಡೋಣೂರು, ಕನ್ನಡ ನಾಟಕ ಮತ್ತು ರಂಗಭೂಮಿ, ನೀಲಪರ್ವತ ಪ್ರಕಾಶನ, ಧಾರವಾಡ, 2007
8. ಚಂದ್ರಶೇಖರ ಕಂಬಾರ, ಉತ್ತರ ಕರ್ನಾಟಕದ ಜನಪದ ರಂಗಭೂಮಿ, ಮನ್ವಂತರ ಪ್ರಕಾಶನ, ಧಾರವಾಡ, 1965
9. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2011
10. ನಾಯಕ್ ಎನ್.ಆರ್., ಕನ್ನಡ ಬಯಲಾಟ ಪರಂಪರೆ, ಜಾನಪದ ಅಕಾಡೆಮಿ, ಬೆಂಗಳುರು, 1982
11. ಪುಟ್ಟಸ್ವಾಮಯ್ಯ ಬಿ. ಕನ್ನಡ ರಂಗಭೂಮಿ ನಡೆದುಬಂದ ದಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 1983
12. ರಂಗನಾಥ ಎಚ್.ಕೆ., ಕರ್ನಾಟಕ ರಂಗಭೂಮಿ, ಹೇಮಂತ ಸಾಹಿತ್ಯ, 2014
13. ಲಕ್ಷ್ಮಣ ಕೌಂಟೆ, ಕರ್ನಾಟಕ ವೃತ್ತಿರಂಗಭೂಮಿ, ಭುವನೇಶ್ವರಿ ಪ್ರಕಾಶನ, ಬೀದರ, 2015